# ಕರ್ನಾಟಕ ವಿಧಾನ ಪರಿಷತ್ತು

| | | | |
|---|---|---|---|
| 1. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 24 (154) |
| 2. | ಸದಸ್ಯರ ಹೆಸರು | : | ಶ್ರೀ ಎಸ್. ರುದ್ರೇಗೌಡ<br>(ವಿಧಾನಸಭೆಯಿಂದ ಚುನಾಯಿತರಾದವರು) |
| 3. | ಉತ್ತರಿಸುವ ದಿನಾಂಕ | : | 13.09.2022 |
| 4. | ಉತ್ತರಿಸುವ ಸಚಿವರು | : | ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ಸರ್ಕಾರದಿಂದ ಅಭಿವೃದ್ಧಿ ಪಡಿಸಿರುವ ಕೈಗಾರಿಕಾ ಪ್ರದೇಶಗಲ್ಲಿ ಕೈಗಾರಿಕೆಗಳನ್ನು ಪ್ರಾರಂಭಿಸದೆ ಉಳಿದಿರುವ ಪ್ರದೇಶವೆಷ್ಟು: | ಕೆ.ಐ.ಎ.ಡಿ.ಬಿ.ಯು ರಾಜ್ಯಾದ್ಯಂತ ಅಭಿವೃದ್ಧಿಪಡಿಸಿರುವ ಕೈಗಾರಿಕಾ ಪ್ರದೇಶಗಳಲ್ಲಿ ಹಂಚಿಕೆ ಪಡೆದು ಯೋಜನೆ ಅನುಷ್ಠಾನಗೊಳಿಸದ ಒಟ್ಟು 9572.63 ಎಕರೆಯುಳ್ಳ 1117 ಉದ್ದಿಮೆದಾರರಿಗೆ ಕೆ.ಐ.ಎ.ಡಿ. ಕಾಯ್ದೆ ಕಲಂ 34-ಬಿ ರಡಿ ನೋಟಿಸ್ ನೀಡಲಾಗಿದ್ದು, ವಿಚಾರಣೆಯು ವಿವಿಧ ಹಂತದಲ್ಲಿರುತ್ತದೆ. |
| (ಆ) | ಶಿವಮೊಗ್ಗ ಜಿಲ್ಲೆಯ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಅನುಪಯುಕ್ತವಾಗಿ ಉಳಿದಿರುವ ಭೂಮಿಯನ್ನು ಸರ್ಕಾರ ಹಿಂಪಡೆಯಲು ಕ್ರಮ ಕೈಗೊಂಡಿದೆಯೇ: | ಶಿವಮೊಗ್ಗ ಜಿಲ್ಲೆ, ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದಲ್ಲಿ ಮೆ: Distilleries Company Pvt. Ltd. ರವರಿಗೆ ಹಂಚಿಕೆಯಾದ ಜಮೀನಿನ ಹೊರತು ಮಂಡಳಿಯ ಸುಪರ್ದಿನಲ್ಲಿ ಹಂಚಿಕೆದಾರರು ತಮ್ಮ ಉದ್ದೇಶಿತ ಯೋಜನೆಗೆ ಬಳಕೆ ಮಾಡದೇ ಇರುವ ಜಮೀನು ಇರುವುದಿಲ್ಲ.<br><br>ಮೆ: Distilleries Company Pvt. Ltd. ರವರಿಗೆ ಮಾಚೇನಹಳ್ಳಿ ಕೈಗಾರಿಕಾ ಪ್ರದೇಶದ ನಿವೇಶನ ಸಂಖ್ಯೆ: 1 ರಿಂದ 6-ಎ ಮತ್ತು 8 ರಿಂದ 17 ರಲ್ಲಿನ 140 ಎಕರೆ ಜಮೀನಿನ ಪೈಕಿ 75 ಎಕರೆ ಜಮೀನು ಹಿಂಪಡೆಯಲು ಕೈಗೊಂಡಿರುವ ಕ್ರಮಗಳ ವಿವರ ಈ ಕೆಳಕಂಡಂತಿದೆ:<br><br>• ದಿನಾಂಕ: 15.01.1982 ಹಾಗೂ 13.10.1982 ರ ಮಂಡಳಿ ಸಭೆಯ ನಿರ್ಣಯದಂತೆ ಮೆ: Distilleries Company Pvt. Ltd., ರವರಿಗೆ ನಿವೇಶನ ಸಂಖ್ಯೆ: 1 ರಿಂದ 17 ರಲ್ಲಿನ |

140 ಎಕರೆ ಜಮೀನನ್ನು Manufacturing of portable liquor and alcohol based chemicals ಯೋಜನೆಗೆ ಪ್ರತಿ ಚ.ಮೀ.ಗೆ ರೂ.3.50 ದರದಂತೆ ದಿನಾಂಕ: 27.11.1982 ರಂದು ಹಂಚಿಕೆ ಮಾಡಲಾಗಿದ್ದು. ದಿನಾಂಕ: 18.03.1983 (3,44,660 ಚ.ಮೀ.) ಹಾಗೂ ದಿನಾಂಕ: 14.01.1985 ರಂದು (2,21,607 ಚ.ಮೀ.) ಸ್ವಾಧೀನ ಪತ್ರಗಳನ್ನು ನೀಡಲಾಗಿದೆ.

- ದಿನಾಂಕ: 29.11.1983ರಲ್ಲಿ 11 ವರ್ಷ ಅವಧಿಗೆ ಗುತ್ತಿಗೆ ಮತ್ತು ಮಾರಾಟ ಕರಾರು ಪತ್ರ ನೆರವೇರಿಸಲಾಗಿದೆ.
- ಸದರಿ ಜಮೀನಿಗೆ ಕೆ.ಐ.ಎ.ಡಿ.ಬಿ.ಯು ಪ್ರತಿ ಚ.ಮೀ.ಗೆ ರೂ.23.10 ರಂತೆ ಅಂತಿಮ ದರ ನಿಗಧಿ ಪಡಿಸಿದ್ದು, ಈ ಅಂತಿಮ ದರದ ವ್ಯತ್ಯಾಸದ ಮೊತ್ತವನ್ನು ಪಾವತಿಸಲು ದಿನಾಂಕ: 14.09.2000 ಮತ್ತು 19.09.2008 ರಂದು ಕಂಪನಿಗೆ ನೋಟಿಸ್ ನೀಡಲಾಗಿತ್ತು.
- ಕಂಪನಿಯು ಹಂಚಿಕೆಯಾದ ಜಮೀನನ್ನು ಸಂಪೂರ್ಣವಾಗಿ ಬಳಕೆ ಮಾಡದಿದ್ದರಿಂದ ಕೆ.ಐ.ಎ.ಡಿ ಕಾಯ್ದೆ ಕಲಂ 34-ಬಿ ರಡಿ ಕ್ರಮವಹಿಸಿ ದಿನಾಂಕ: 12.05.2005 ರಂದು ಗುತ್ತಿಗೆ ಕರಾರು ಪತ್ರದ ಕಲಂ-4 ರಡಿ ನೋಟೀಸ್ ನೀಡಿ, ನಂತರ ದಿನಾಂಕ: 03.11.2010 ರಂದು ಸದರಿ ಕಂಪನಿಗೆ Termination of lease order ನೀಡಿ ಬಳಕೆ ಮಾಡದ 75 ಎಕರೆ ಜಮೀನನ್ನು ಹಿಂಪಡೆಯಲು ಆದೇಶಿಸಲಾಗಿದೆ.
- ಕಂಪನಿಯು ಈ ಕ್ರಮವನ್ನು ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದಲ್ಲಿ ದಾಖಲಿಸಿದ್ದ ರಿಟ್ ಅರ್ಜಿ ಸಂಖ್ಯೆ: 35948/2010 ಪ್ರಕರಣದಲ್ಲಿ ದಿನಾಂಕ: 09.10.2018ರ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಮಂಡಳಿಯು ನೀಡಿದ ಅಂತಿಮ ದರದ ವ್ಯತ್ಯಾಸ ಹಣ ಪಾವತಿಸಲು ನೋಟಿಸ್ ಹಾಗೂ Termination of lease order

| | | |
|---|---|---|
| | | ಗಳನ್ನು ವಜಾಗೊಳಿಸಿ, ಮಂಡಳಿ ನಿಗದಿಪಡಿಸಿರುವ ಅಂತಿಮ ದರವನ್ನು ಮತ್ತೊಮ್ಮೆ ಪರಿಶೀಲಿಸಲು ನಿರ್ದೇಶಿಸಿ, ರಿಟ್ ಅರ್ಜಿದಾರರು ಅಂತಿಮ ದರ ಪಾವತಿಸಿದ ನಂತರ ಶುದ್ಧಕ್ರಯ ಪಡೆಯಲು ಅರ್ಹರಾಗುತ್ತಾರೆ ಎಂದು ಆದೇಶಿಸಿರುತ್ತದೆ.<br>• ಕೆ.ಐ.ಎ.ಡಿ.ಬಿ.ಯು ಈ ಆದೇಶವನ್ನು ಪ್ರಶ್ನಿಸಿ, ಮಾನ್ಯ ಉಚ್ಛ ನ್ಯಾಯಾಲಯದದಲ್ಲಿ ದಾಖಲಿಸಿದ್ದ ರಿಟ್ ಅಪೀಲ್ ಸಂಖ್ಯೆ: 3150/2018 ಪ್ರಕರಣದಲ್ಲಿ ದಿನಾಂಕ: 22.02.2022ರ ಆದೇಶದಲ್ಲಿ ಮಾನ್ಯ ನ್ಯಾಯಾಲಯವು ಏಕಸದಸ್ಯ ಪೀಠದ ಆದೇಶವನ್ನು ಎತ್ತಿಹಿಡಿದು, ಅಂತಿಮ ದರವನ್ನು ಮತ್ತೊಮ್ಮೆ ಪರಿಶೀಲಿಸಲು ಹಾಗೂ ಮಂಡಳಿಯು ಸದರಿ ಕಂಪನಿಗೆ ಹಂಚಿಕೆ ನಿಯಮಗಳನ್ನು ಉಲ್ಲಂಘಿಸಿರುವ ಬಗ್ಗೆ ಕಾರಣಗಳನ್ನು ಪಡೆಯಲು ಮತ್ತೊಮ್ಮೆ ವಿಚಾರಣೆ ಮೂಲಕ ಅವಕಾಶ ನೀಡಲು ನಿರ್ದೇಶಿಸಿ, ಅಂತಿಮ ದರ ನಿಗದಿಯಾದ ನಂತರ ಅರ್ಜಿದಾರರು ಸದರಿ ಮೊತ್ತವನ್ನು ಪಾವತಿಸಿದ ನಂತರ 75 ಎಕರೆ ವಿಸ್ತೀರ್ಣಕ್ಕೆ ಶುದ್ಧಕ್ರಯ ಪಡೆಯಲು ಅರ್ಹರಾಗುತ್ತಾರೆ ಎಂದು ಆದೇಶಿರುತ್ತದೆ.<br>• ಪ್ರಸ್ತುತ ಸದರಿ ಘಟಕವು ಸ್ಥಗಿತಗೊಂಡಿದ್ದು, ಸದರಿ ಕಂಪನಿಯವರೊಂದಿಗೆ ವಿಚಾರಣೆ ನಡೆಸುತ್ತಿದ್ದು ಮಾನ್ಯ ಉಚ್ಛ ನ್ಯಾಯಾಲಯದ ಆದೇಶದನ್ವಯ ಕ್ರಮ ಜರುಗಿಸಲಾಗುತ್ತದೆ. |
| (ಇ) | ಇದೇ ಕೈಗಾರಿಕಾ ಪ್ರದೇಶದಲ್ಲಿ ಸಾಫ್ಟ್‌ವೇರ್ ಉದ್ಯಮಿಗಳಿಗೆ ಕಿಯೋನಿಕ್ಸ್ ಆಶ್ರಯದಲ್ಲಿರುವ ಸುಮಾರು 25 ಎಕರೆ ಪ್ರದೇಶವು ಕಳೆದ 15 ವರ್ಷಗಳಿಂದ ಅನುಪಯುಕ್ತವಾಗಿರುವುದು | ಕೆ.ಐ.ಎ.ಡಿ.ಬಿ.ಯು ಮೆ: ಕಿಯೋನಿಕ್ಸ್ ರವರಿಗೆ ಶಿವಮೊಗ್ಗ ಜಿಲ್ಲೆ, ಮಾಚೇನಹಳ್ಳಿ ಗ್ರಾಮದ ಒಟ್ಟು 41 ಎಕರೆ ಜಮೀನನ್ನು ದಿನಾಂಕ: 21.08.2008 ರಂದು ಹಂಚಿಕೆ ಮಾಡಿದ್ದು, ದಿನಾಂಕ: 24.08.2008 ರಂದು ಸ್ವಾಧೀನಪತ್ರ ನೀಡಿ, ದಿನಾಂಕ: 04.05.2010 ರಂದು ಶುದ್ಧ ಕ್ರಯಪತ್ರ |

| | | |
|---|---|---|
| | ಸರ್ಕಾರದ ಗಮನಕ್ಕೆ ಬಂದಿದೆಯೇ: | ಮಾಡಿಕೊಡಲಾಗಿದೆ.<br><br>ಕಿಯೋನಿಕ್ಸ್ ಸಂಸ್ಥೆಯ ಆಶ್ರಯದಲ್ಲಿ 19 ಎಕರೆ ಜಮೀನು ಮಾತ್ರ ಉಳಿದಿದ್ದು. 2010 ರಿಂದ 2022ರ ಅವಧಿಯಲ್ಲಿ 5 ಬಾರಿ ವಿಶೇಷ ಆರ್ಥಿಕ ವಲಯಕ್ಕೆ ಸಹ-ಅಭಿವೃದ್ಧಿಗಾರರಾಗಿ ಸೇರಲು ಟೆಂಡರ್ ಮುಖಾಂತರ (Expression of Interest) ಅಭಿವೃದ್ಧಿಗಾರರನ್ನು ಆಹ್ವಾನಿಸಲಾಗಿದೆ.<br><br>ಆದರೆ ಸಹಭಾಗಿತ್ವಕ್ಕೆ ಯಾರೂ ಭಾಗವಹಿಸದ ಕಾರಣ, ಸದರಿ 19 ಎಕರೆ ಜಮೀನನ್ನು SEZ ನಿಂದ Non-SEZ ಗೆ ಪರಿವರ್ತಿಸಲು ದಿನಾಂಕ: 19.08.2022 ರಂದು ನಡೆದ ಕಿಯೋನಿಕ್ಸ್ ಸಂಸ್ಥೆಯ 203ನೇ ಮಂಡಳಿ ಸಭೆಯಲ್ಲಿ ಮಂಡಿಸಲಾಗಿ, ಸಭೆಯು ಸದರಿ 19 ಎಕರೆ ಜಮೀನನ್ನು Non-SEZ ಉದ್ದೇಶಕ್ಕಾಗಿ ಪರಿವರ್ತಿಸಲು ನಿರ್ಣಯಿಸಿರುತ್ತದೆ ಹಾಗೂ ಜಮೀನನ್ನು Non-SEZ ಉದ್ದೇಶಕ್ಕಾಗಿ ಪರಿವರ್ತಿಸಲು ಪ್ರಸ್ತಾವನೆಯನ್ನು ಸರ್ಕಾರಕ್ಕೆ ಸಲ್ಲಿಸಲಾಗುತ್ತಿದೆ. |
| ಈ) | ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ತೆಗೆದುಕೊಂಡ ಕ್ರಮಗಳೇನು: | |
| ಊ) | ಸರ್ಕಾರದಿಂದ ನಿರ್ಮಾಣಗೊಂಡ ಕಿಯೋನಿಕ್ಸ್ ಆಶ್ರಯದಲ್ಲಿರುವ ಸಾಫ್ಟ್ ವೇರ್ ಟೆಕ್ನಾಲಜಿ ಟವರ್ ಪೂರ್ಣ ಉಪಯೋಗವಾಗಿದೆಯೇ: ಇದರಿಂದ ಸರ್ಕಾರಕ್ಕೆ ಬರುವ ಆದಾಯವೆಷ್ಟು? | ಸರ್ಕಾರದಿಂದ ನಿರ್ಮಾಣಗೊಂಡ ಕಿಯೋನಿಕ್ಸ್ ಆಶ್ರಯದಲ್ಲಿರುವ ಸಾಫ್ಟ್.ವೇರ್ ಟೆಕ್ನಾಲಜಿ ಟವರ್ ಪೂರ್ಣ ಉಪಯೋಗವಾಗಿರುತ್ತದೆ.<br><br>ಸದರಿ ಐಟಿ ಪಾರ್ಕ್‌ನಲ್ಲಿ ಈ ಕೆಳಕಂಡ 10 ಕಂಪನಿಗಳು ಕಾರ್ಯನಿರ್ವಹಿಸುತ್ತಿವೆ.<br><br>1. M/s Gallagher Service Centre LLP<br>2. M/s Master Abalone Solutions<br>3. M/s Seed Startup House<br>4. M/s Raghavndra Associates<br>5. M/s KADMS Data Solutions<br>6. M/s Mitra Softwares<br>7. M/s Campus Tech<br>8. M/s AJS Techno Soft<br>9. M/s Polaris Software Solutions |

10. M/s Isthaartha Software Solutions

ಈ ಕಂಪೆನಿಗಳಲ್ಲಿ ಒಟ್ಟು 610 ಸಿಬ್ಬಂದಿಗಳು ಕಾರ್ಯನಿರ್ವಹಿಸುತ್ತಿರುತ್ತಾರೆ.

ಕಿಯೋನಿಕ್ಸ್ ಸಂಸ್ಥೆಗೆ ವಾರ್ಷಿಕ ರೂ.22.78 ಲಕ್ಷ ಆದಾಯ ಬರುತ್ತದೆ. 2ನೇ ಹಂತದಲ್ಲಿ 2.5 ಎಕರೆ ಪ್ರದೇಶದಲ್ಲಿ (Non-SEZ) ರೂ.27.14 ಕೋಟಿ ವೆಚ್ಚದಲ್ಲಿ ಪಿಪಿಪಿ ಮಾದರಿಯಲ್ಲಿ ಐಟಿ ಪಾರ್ಕ್ ನಿರ್ಮಾಣ ಮಾಡಲು ಯೋಜಿಸಲಾಗಿದೆ.

ಸಂಖ್ಯೆ: ಸಿಐ 204 ಐಎಪಿ (ಇ) 2022

(ಡಾ॥ ಮುರುಗೇಶ್ ಆರ್. ನಿರಾಣಿ)
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಸಚಿವರು